O.S. NO. 27/2023

PW –1 .

Dated 17–08– 2024.

<u>ಸಾಕ್ಷಿಯನ್ನು ಈ ದಿನ ದಿನಾಂಕ 17–08–2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .</u>

<u>ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಆರ್ ಎ ಪಿ ವಕೀಲರಿಂದಃ</u>

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಕಡತವಾಳ ಗ್ರಾಮ ಸರ್ವೆ ನಂ. 1/3 ರ ಪಹಣಿ ಪತ್ರಿಕೆ ನಿಪಿ -1 ಎಂದು, ಅದೇ ಗ್ರಾಮ ಸರ್ವೆ ನಂ. 51/1 ರ ಕೈ ಬರಹ ಪಹಣಿ ಪತ್ರಿಕೆಗಳ ದೃಡಿಕೃತ ನಕಲುಗಳು ನಿಪಿ -2 ರಿಂದ 5. ಅದೇ ಗ್ರಾಮ ಸರ್ವೆ ನಂ. 50/1 ರ ಗಣಕೀಕೃತ ಪಹಣಿ ಪತ್ರಿಕೆ ನಿಪಿ - 6 ಎಂದು, ಅದೇ ಗ್ರಾಮ ಸರ್ವೆ ನಂ. 35/ಎ ಗಣಕೀಕೃತ ಪಹಣಿ ಪತ್ರಿಕೆ ನಿಪಿ - 7 ಎಂದು, ಅದೇ ಗ್ರಾಮ ಸರ್ವೆ ನಂ. 48/ 1 ರ ಗಣಕೀಕೃತ ಪಹಣಿ ಪತ್ರಿಕೆ ನಿಪಿ - 8 ಎಂದು, ಅದೇ ಗ್ರಾಮ ಸರ್ವೆ ನಂ. 53/2 ಎ ರ 4 ಕೈ ಬರಹ ಪಹಣಿ ಪತ್ರಿಕೆಗಳ ದೃಡೀಕೃತ ನಕಲು ನಿಪಿ - 9 ರಿಂದ 12 ಎಂದು, ಅದೇ ಗ್ರಾಮ ಸರ್ವೆ ನಂ. 53/2 ರ ಕೈ ಬರಹ ಪಹಣಿ ಪತ್ರಿಕೆಯ ದೃಡೀಕೃತ ನಕಲು ನಿಪಿ - 13 ಎಂದು, ಅದೇ ಗ್ರಾಮ ಸರ್ವೆ ನಂ. 53/2 ರ ಗಣಕೀಕೃತ ಪಹಣಿ ಪತ್ರಿಕೆ ನಿಪಿ - 14 ಎಂದು, ಗ್ರಾಮ ಪಂಚಾಯತಿ ಕಲಭಾಂವಿ ರವರಿಗೆ ಸಲ್ಲಿಸಿದ ಅರ್ಜಿಯ ಸ್ವೀಕೃತಿ ಪ್ರತಿ ನಿಪಿ - 15 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.